**3** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**C.C. No.1106/2025**

**CW- 3** **PW:3**

| | | |
|---|---|---|
| ಸಾಕ್ಷಿಯ ಹೆಸರು | ಃ | ಮಹಮ್ಮದ ಜುನೇರ |
| ತಂದೆ /ಗಂಡನ ಹೆಸರು | ಃ | ಖುರ್ಷಿದ ಅಹಮ್ಮದ |
| ವಯಸ್ಸು | ಃ | 19 ವರ್ಷ |
| ಉದ್ಯೋಗ | ಃ | ವಿದ್ಯಾರ್ಥಿ |
| ವಾಸಸ್ಥಳ | ಃ | ಮಲ್ಲಿಕಾರ್ಜುನ ನಗರ, ಹುಬ್ಬಳ್ಳಿ |

ದಿಃ **03.07.2026.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇರುವುದಿಲ್ಲ. ನಾನು ಯಾವದೇ ಕಮೆಂಟನ್ನು ಮಾಡಿರುವುದಿಲ್ಲ. ಪೊಲಿಸರ ಮುಂದೆ ಯಾವದೇ ಹೇಳಿಕೆ ನೀಡಿರುವುದಿಲ್ಲ. ಆರೋಪಿತರ ಪರಿಚಯ ಇಲ್ಲ.

**(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 19.02.2024 ರಂದು 1 ನೇ ಆರೋಪಿ ಅಜಿತ ಅತ್ತರವಾಲೆ ಇವರು ಒಂದು ವಿಡಿಯೊವನ್ನು ಇನ್ಸ್ಟಾಗ್ರಾಮನಲ್ಲಿ ಅಪ್ಲೋಡ ಮಾಡಿದ್ದು ಅದರಲ್ಲಿ I am not a second option ಅಂತಾ ಬರೆದುಕೊಂಡಿದ್ದು ಅದನ್ನು ನೋಡಿ ನಾನು ಲವ್ ಮಾರ್ಕ್ ಮತ್ತು ಬೆಂಕಿ ಮಾರ್ಕ್ ಇರುವ ಚಿತ್ರವನ್ನು ಕಮೆಂಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಬಗ್ಗೆ 1 ನೇ ಆರೋಪಿತ ಮತ್ತು ಉಳಿದ ಆರೋಪಿತರ ವಿರುದ್ದ ಪ್ರಕರಣ ದಾಖಲಾಗಿರುತ್ತದೆ ಎನ್ನುವ ವಿಚಾರ ಪೊಲಿಸರು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ದಿಃ

19.06.2025 ರಂದು ಈ ಗ ಓದಿ ಹೇಳಿದಂತೆ ಪೊಲಿಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಬಿಯೋಜಕರು ಸಾಕ್ಷಿಯ ಹೇಳಿಕೆಯನ್ನು ಗುರುತಿಸಲು ಕೋರಿಕೊಂಡಿದ್ದು ಮೇಲ್ಕಂಡ ಸಾಕ್ಷವನ್ನು ಗಮನಿಸಿದಾಗ ಸಾಕ್ಷಿಯು ಅಬಿಯೊಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವುದರಿಂದ ಅದರ ಪರಿಶೀಲನೆ ಸಲುವಾಗಿ ಸಾಕ್ಷಿಯ ಹೇಳಿಕೆಯನ್ನು ನಿಪಿ.6 ಎಂದು ಗುರುತಿಸಲಾಯಿತು. ನಿಪಿ.6 ರಂತೆ ನಾನು ಪೊಲಿಸರು ಮುಂದೆ ಹೇಳಿಕೆ ನೀಡಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿಸವಾಲುಃ ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**
**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.